ನಿಮ್ಮೊಡನೆ

# ಬೆಸುಗೆಯಲ್ಲಿ ಬಿರುಕು

ಸರಳ ಸಾಮೂಹಿಕ ಮದುವೆಗಳು, ಮಂತ್ರ ಮಾಂಗಲ್ಯದಂತಹ ಕ್ರಾಂತಿಕಾರಿ ವಿವಾಹ ಆಚರಣೆಗಳು ಒಂದೆಡೆ ಅಸ್ತಿತ್ವದಲ್ಲಿದ್ದರೂ, ಅದ್ದೂರಿ ಮದುವೆಗಳ ಆಡಂಬರಗಳೂ ಮುಂದುವರಿದಿವೆ. ವೈಭವೋಪೇತ ಹವಾನಿಯಂತ್ರಿತ ಕಲ್ಯಾಣ ಮಂದಿರಗಳು, ಪುಷ್ಪಾಲಂಕಾರ, ದೀಪಾಲಂಕಾರ, ಬಗೆಬಗೆಯ ಭಕ್ಷ್ಯಭೋಜ್ಯಗಳ ಪೂರೈಕೆಯ ಬೇಡಿಕೆ– ಮದುವೆಗಳ ಅವಶ್ಯಕ ಪರಿಕರಗಳೇ ಆಗಿವೆ.



ಗಂಡು ಹೆಣ್ಣನ್ನು ಸಾಮಾಜಿಕ ಚೌಕಟ್ಟಿನಲ್ಲಿ ಬೆಸೆಯುವ ವಿವಾಹ ಎಂಬ ವ್ಯವಸ್ಥೆ ಜಾಗತಿಕ ನಾಗರಿಕತೆಗೆ ಭಾರತೀಯ ಕೊಡುಗೆ ಎಂಬಷ್ಟು ಮಹತ್ವ ಉಳಿಸಿಕೊಂಡಿದೆ. ಕುಟುಂಬ ವ್ಯವಸ್ಥೆಗೆ ಭದ್ರ ಬುನಾದಿ ಹಾಕುವ ವಿವಾಹ ಬಂಧನ, ಒಲಿದ ಜೀವಗಳನ್ನು ಜೀವನಪರ್ಯಂತ ಪ್ರೀತಿ ವಿಶ್ವಾಸದ ಚೌಕಟ್ಟಿನಲ್ಲಿ ಒಂದುಗೂಡಿಸುವ ಸಾಮಾಜಿಕ ಸಂಸ್ಥೆಯೂ ಆಗಿದೆ. ಬಹು ಭಾಷೆ, ಆಚರಣೆ, ನಂಬಿಕೆಗಳ ಭಾರತೀಯ ಸಮುದಾಯದಲ್ಲಿ ವಿವಾಹ ಆಚರಣೆಗೆ ಸಂಬಂಧಿಸಿ ವೈವಿಧ್ಯಗಳಿದ್ದರೂ ಅದರ ಕಟ್ಟುಪಾಡುಗಳನ್ನು ಒಪ್ಪಿಕೊಂಡಿರುವ ಸಾಮಾನ್ಯ ಸೂತ್ರವೇ ಭಾರತೀಯ ಕುಟುಂಬ ವ್ಯವಸ್ಥೆಯನ್ನು ವಿಶ್ವದ ಇತರ ನಾಗರಿಕ ಸಮಾಜಗಳಲ್ಲಿ ವಿಭಿನ್ನವಾಗಿರಿಸಿದೆ. ಸಂಸಾರದ ಚೌಕಟ್ಟಿಗೆ ಒಳಗಾಗುವ ಗಂಡು ಹೆಣ್ಣಿಗೆ, ಸಮಾನ ಹಕ್ಕು ಮತ್ತು ಕರ್ತವ್ಯಗಳನ್ನು ಬೋಧಿಸುವ ಕ್ರಮ ವಿವಾಹದ ಆಚರಣೆಗಳಲ್ಲಿ ಅಂತರ್ಗತವಾಗಿದೆ. ಅಷ್ಟರಮಟ್ಟಿಗೆ ವಿವಾಹ ಬಂಧ ಅನುಗಾಲದ ಅನುಬಂಧವಾಗಿದೆ.

ಅದು ಅರ್ಹ ವಯಸ್ಸನ್ನು ಮುಟ್ಟಿದ ಪ್ರೌಢ ಗಂಡು– ಹೆಣ್ಣಿನ ಸಾಮಾಜಿಕ ಒಪ್ಪಂದ. ಎರಡು ಜೀವಗಳನ್ನೆಂತೋ ಅಂತೆಯೇ ಎರಡು ಕುಟುಂಬಗಳ ಮಧ್ಯೆ ಬಾಂಧವ್ಯ ಬೆಸೆಯುವ ಸಂದರ್ಭ. ಇದು ಸಾಮಾಜಿಕವಾಗಿ ಆಚರಣೆಯ ರೂಪದಲ್ಲಿ ನಡೆಯುವಾಗ ಅದಕ್ಕೆ ಸಂಭ್ರಮದ ಆಕರ್ಷಣೆ ಸೇರುತ್ತದೆ. ಮದುವೆ ಎಂಬುದು ನೆಪ, ಬಂಧುಗಳ ದರ್ಶನವೇ ಅದರ ನೈಜ ಉದ್ದೇಶ ಎಂಬಷ್ಟರ ಮಟ್ಟಿಗೆ ವಿವಾಹ ಆಚರಣೆಗೆ ಸಾಕ್ಷಿಯಾಗುವ ಬಂಧುಗಳು ಉತ್ಸಾಹಿತರಾಗುತ್ತಾರೆ. ಆಪ್ತ ಬಂಧುಗಳ ಸಮ್ಮುಖದಲ್ಲಿ ಕುಟುಂಬ ವ್ಯವಸ್ಥೆಗೆ ಸೇರಿಕೊಳ್ಳುವ ವಧೂವರರು ಒಂದು ಬಗೆಯ ಸುರಕ್ಷತೆಯ ಭಾವದಲ್ಲಿ ಸಂಸಾರ ಸಾಗರಕ್ಕೆ ಧುಮುಕುತ್ತಾರೆ. ಪರಸ್ಪರ ಅರಿತುಕೊಳ್ಳುವ ನೂತನ ದಂಪತಿಯ ಪ್ರಾರಂಭದ ಪ್ರಾಯೋಗಿಕ ಹಂತ ಒಂದೆರಡು ವರ್ಷಗಳಲ್ಲಿ ಮಗುವಿನ ಪ್ರವೇಶದೊಂದಿಗೆ ಗಟ್ಟಿಯಾಗುತ್ತ ಕ್ರಮೇಣ ಪ್ರಬುದ್ಧವಾಗುತ್ತದೆ. ಉತ್ತಮ ಸಮಾಜ ನಿರ್ಮಾಣದಲ್ಲಿ ಸುಸಂಸ್ಕೃತ ಕುಟುಂಬ ವ್ಯವಸ್ಥೆಯ ಪಾತ್ರ ಮಹತ್ವದ್ದಾಗಿರುವುದರಿಂದ ಈ ಕುರಿತ ಪ್ರಾಥಮಿಕ ತಿಳಿವಳಿಕೆಯನ್ನು ಮದುವೆಯ ಸಂದರ್ಭದಲ್ಲಿಯೇ ಮೂಡಿಸುವ ಪ್ರಯತ್ನ ಎಲ್ಲ ಸಮುದಾಯಗಳ ವಿವಾಹ ಸಂಹಿತೆಗಳಲ್ಲಿದೆ.

ಆದರೆ, ಸಾಮಾಜಿಕ ಬದುಕಿನಲ್ಲಿ ಆಗುತ್ತಿರುವ ಬದಲಾವಣೆಗಳು ವಿವಾಹ ಪ್ರಕ್ರಿಯೆಗೆ ವ್ಯಾವಹಾರಿಕ ಸ್ವರೂಪ ನೀಡಿರುವುದರಿಂದ ಪವಿತ್ರ ಸಾಮಾಜಿಕ ಆಚರಣೆ ಕುಟುಂಬ ಪ್ರತಿಷ್ಠೆ, ಶ್ರೀಮಂತಿಕೆಯ ಪ್ರದರ್ಶನ, ದುಬಾರಿ ಖರ್ಚುಗಳಿಗೆ ಎಡೆ ಮಾಡಿಕೊಡುತ್ತಿದೆ. ಮದುವೆ, ಎರಡು ಜೀವಿಗಳ ಮತ್ತು ಎರಡು ಕುಟುಂಬಗಳ ಸಾಮಾಜಿಕ ಬೆಸುಗೆಯ ಸಂದರ್ಭವಷ್ಟೇ ಆಗಿರುವುದರಿಂದ ಅದು ಆದಷ್ಟು ಸರಳವಾಗಿರಬೇಕು ಎಂಬ ಸಾಮಾಜಿಕ ಚಿಂತಕರ ಪ್ರತಿಪಾದನೆಗಳು ಸುಶಿಕ್ಷಿತ ಕುಟುಂಬಗಳಿಗೂ ಅಪಥ್ಯವಾಗಿರುವುದು ಈಚಿನ ದಶಕಗಳ ವಿದ್ಯಮಾನ. ಸರಳ ಸಾಮೂಹಿಕ ಮದುವೆಗಳು, ಮಂತ್ರ ಮಾಂಗಲ್ಯದಂತಹ ಕ್ರಾಂತಿಕಾರಿ ವಿವಾಹ ಆಚರಣೆಗಳು ಒಂದೆಡೆ ಅಸ್ತಿತ್ವದಲ್ಲಿದ್ದರೂ, ಅದ್ದೂರಿ ಮದುವೆಗಳ ಆಡಂಬರಗಳೂ ಮುಂದುವರಿದಿವೆ. ವೈಭವೋಪೇತ ಹವಾನಿಯಂತ್ರಿತ ಕಲ್ಯಾಣ ಮಂದಿರಗಳು, ಪುಷ್ಪಾಲಂಕಾರ, ದೀಪಾಲಂಕಾರ, ಬಗೆಬಗೆಯ ಭಕ್ಷ್ಯಭೋಜ್ಯಗಳ ಪೂರೈಕೆಯ ಬೇಡಿಕೆ– ಮದುವೆಗಳ ಅವಶ್ಯಕ ಪರಿಕರಗಳೇ ಆಗಿವೆ. ಮದುವೆಯ ಅಧಿಕೃತ ನೋಂದಣಿಯನ್ನು ಕೇವಲ 135 ರೂಪಾಯಿಗಳಲ್ಲಿ ಮುಗಿಸುವ ವ್ಯವಸ್ಥೆಯನ್ನು ಸರ್ಕಾರ ರೂಪಿಸಿದ್ದರೂ ಅದ್ದೂರಿ ಆಚರಣೆಯ ನೆಪದಲ್ಲಿ ಲಕ್ಷಗಟ್ಟಲೆ ಖರ್ಚು ಮಾಡಿ ಆರ್ಥಿಕ ಹೊರೆಯನ್ನು ಹೊತ್ತುಕೊಳ್ಳುವ ಅನಿವಾರ್ಯ ಸಂಕಟವನ್ನು ಅನುಭವಿಸುವ ಮನಃಸ್ಥಿತಿ ನಾಗರಿಕ ಸಮಾಜದಲ್ಲಿ ಉಳಿದುಕೊಂಡಿದೆ.

ಸಂದರ್ಭದ ಸಣ್ಣಪುಟ್ಟ ಲೋಪಗಳೇ ಮದುವೆ ಮುರಿದು ಹೋಗುವುದಕ್ಕೆ ಕಾರಣವಾಗುವ ಬೆಳವಣಿಗೆ ಈಚಿನ ವರ್ಷಗಳಲ್ಲಿ ಕಂಡು ಬಂದಿರುವ ವಿದ್ಯಮಾನ. ಬಂದ ನೆಂಟರಿಗೆ ಹೊದೆಯಲು ಕಂಬಳಿ ಕೊಡಲಿಲ್ಲವೆಂಬ ಕಾರಣಕ್ಕೆ ಎರಡೂ ಕಡೆಯವರು ಹೊಡೆದಾಡಿ ಪೊಲೀಸ್ ಠಾಣೆ ಹತ್ತಿದ್ದಲ್ಲದೆ, ಪರಸ್ಪರ ದೂರು ನೀಡುವ ಮೂಲಕ ಸಂಬಂಧವನ್ನೇ ರದ್ದು ಪಡಿಸಿಕೊಂಡ ಘಟನೆ ಇಂಥ ಸಾಮಾಜಿಕ ಅಸಹನೆಯ ನಿದರ್ಶನ. ಆತಿಥ್ಯದಲ್ಲಿ ಕೊಂಚ ಏರುಪೇರಾದರೂ ಬಾಂಧವ್ಯವನ್ನೇ ಮುರಿದುಕೊಳ್ಳುವಂಥ ಮನಃಸ್ಥಿತಿಗೆ ಈಗಿನ ಸಮಾಜ ಕುಸಿದಿರುವುದು ಒಳ್ಳೆಯ ಲಕ್ಷಣವಂತೂ ಅಲ್ಲ. ಬಾಂಧವ್ಯದ ಬೆಸುಗೆಯ ಕಾರ್ಯದಲ್ಲಿ ಆತಿಥ್ಯದ ಅರೆಕೊರೆಗಳು ಅಡ್ಡಿಯಾಗಬಾರದು. ನವದಂಪತಿಯ ಮುಂದಿನ ಜೀವನದಲ್ಲಿ ಎಂತೆಂಥ ಸವಾಲುಗಳು ಎದುರಾಗುತ್ತವೆಯೋ.. ಅದಕ್ಕೆ ತಕ್ಕ ಸ್ಥೈರ್ಯವನ್ನು ನೀಡಬೇಕಾದ ಬಂಧು ಸಮೂಹ ಕ್ಷುಲ್ಲಕ ಸಂಗತಿಗಳಿಗೆ ಅತಿರೇಕದ ಪ್ರತಿಕ್ರಿಯೆ ನೀಡುವ ಅವಿವೇಕಕ್ಕೆ ಎಡೆ ಕೊಡಬಾರದು.

■ ಲಕ್ಷ್ಮಣ ಕೊಡಸೆ